**2ನೇ ಹೆಚ್ಚುವರಿ ಸಿವಿಲ್ ಜಡ್ಜ್ ಮತ್ತು ಜೆಎಂಎಫ್‌ಸಿ ನ್ಯಾಯಾಲಯ, ಹೊಸಕೋಟೆ**

**ಓ..ಎಸ್.413/2012**

ಪಿ.ಡಬ್ಲ್ಯೂ - 1 - ರತ್ನಮ್ಮ

**ಪ್ರಮಾಣೀಕರಿಸಿದ ದಿನಾಂಕ:01.10.2024**

ಮುಂದುವರೆದ ಪಾಟೀ ಸವಾಲು : ಪ್ರತಿವಾದಿ ಪರ ವಕೀಲರಿಂದ : -

ಸಾಕ್ಷಿಗೆ ತಮ್ಮ ವಾದಪತ್ರದಲ್ಲಿ ಸಾಕ್ಷಿಯ ತಂದೆ ಕೆಂಪಣ್ಣನವರಿಗೆ ಇಬ್ಬರು ಹೆಂಡತಿಯರಿದ್ದು, ಅವರ ಹೆಸರನ್ನು ಮುನಿಆಂಜಿನಮ್ಮ ಮತ್ತು ಮುನಿತಾಯಮ್ಮ ಎಂದು ಬರೆಯಲಾಗಿದೆ ಎಂದರೆ ಸಾಕ್ಷಿ ಸದರಿ ಮೊದಲನೇ ಹೆಂಡತಿಯ ಹೆಸರು ಮುನಿನರಸಮ್ಮ ಇದ್ದು, ವಾದಪತ್ರದಲ್ಲಿ ಮುನಿಆಂಜಿನಮ್ಮ ಎಂದು ಬರೆದಿರುವುದಿಲ್ಲ ಎಂದು ನುಡಿಯುತ್ತಾರೆ. ವಾದಪತ್ರದಲ್ಲಿ ಹೇಳಿರುವ ಸದರಿ ವಿಷಯವು ಸುಳ್ಳು ಎಂದರೆ ಸರಿಯಲ್ಲ. ನನ್ನ ವಾದಪತ್ರದಲ್ಲಿ ಮುನಿಆಂಜಿನಮ್ಮ ಎಂದು ಬರೆದಿದ್ದರೂ ಸಹ, ನನ್ನ ಪ್ರಮಾಣಪತ್ರದಲ್ಲಿ ಮುನಿನರಸಮ್ಮ ಎಂದು ತಿದ್ದಿ ಬರೆಯಲಾಗಿದೆ ಎಂದರೆ ಸರಿಯಲ್ಲ. ವಾದಪತ್ರದಲ್ಲಿ ಮುನಿಆಂಜಿನಮ್ಮ ಎಂದು ಯಾರು ಬರೆಸಿರುತ್ತಾರೆ ಎಂದು ಕೇಳಲಾಗಿ ಸಾಕ್ಷಿ ಮೊದಲು ಅವರ ತಮ್ಮ ಬರೆಸಿರುತ್ತಾರೆ ಎಂದು ಹೇಳಿ, ನಂತರ ತಮಗೆ ಗೊತ್ತಿಲ್ಲ ಎಂದು ನುಡಿಯುತ್ತಾರೆ. ನನ್ನ ತಮ್ಮಂದರಿ ಜೊತೆಗೆ ನನ್ನ ಸಂಬಂಧ ಸರಿಯಾಗಿರುತ್ತದೆ. ಸದರಿ ನನ್ನ ತಮ್ಮಂದಿರೇ, ನನಗೆ ದಾಖಲೆಗಳನ್ನು ಒದಗಿಸಿಕೊಟ್ಟಿರುತ್ತಾರೆ. ನನ್ನ ತಮ್ಮಂದಿರೇ ನನಗೆ ದಾವೆ ಸಲ್ಲಿಸಲು ಹೇಳಿರುತ್ತಾರೆ ಎಂದರೆ ಸರಿಯಲ್ಲ. ನನ್ನ ಸದರಿ ತಮ್ಮಂದಿರು ಪ್ರಸ್ತುತ ದಾವೆಯ 2 ಮತ್ತು 6 ನೇ ಪ್ರತಿವಾದಿಗಳಾಗಿದ್ದು, ಅವರು ತಮಗೆ ನ್ಯಾಯಾಲಯದಿಂದ ಸಮನ್ಸ್ ಜಾರಿಯಾದಾಗ ನನಗೆ ನ್ಯಾಯಾಲಯಕ್ಕೆ ಬರಬೇಡ ಎಂದು ಹೇಳಿರುವುದಿಲ್ಲ. 7ನೇ ಪ್ರತಿವಾದಿಯ ಜೊತೆಯೂ ಸಹ ನನ್ನ ಸಂಬಂಧ ಚೆನ್ನಾಗಿರುತ್ತದೆ. ನನ್ನ ತಮ್ಮಂದಿರು ಇಬ್ಬರೂ 1980 ರಿಂದ ಬೇರೆ ಬೇರೆ ವಾಸವಿರುತ್ತಾರೆ ಎಂದರೆ ಸರಿ. ನನ್ನ ತಮ್ಮಂದಿರು ಇಬ್ಬರು ಆಸ್ತಿಗಳನ್ನು ಹಂಚಿಕೊಂಡಿರುತ್ತಾರೆ ಎಂದರೆ ನನಗೆ ಗೊತ್ತಿಲ್ಲ. ನಿ.ಪಿ.4 ರಲ್ಲಿ

ಮುನಿತಾಯಮ್ಮನವರಿಗೆ 37 ಗುಂಟೆ, ಶ್ರೀನಿವಾಸ ರವರಿಗೆ 36 1/2 ಗುಂಟೆ, ಪ್ರಕಾಶ್ ರವರಿಗೆ 36 1/2 ಗುಂಟೆ ಎಂದು, ಸರ್ವೆ ನಂ.32 ರಲ್ಲಿ ವಿಭಾಗ ಮಾಡಿಕೊಂಡಿರುತ್ತಾರೆ ಎಂದರೆ ಸರಿ. ಸದರಿ ಬಗ್ಗೆ ನನಗೆ ಗೊತ್ತಿಲ್ಲ. ಪ್ರಸ್ತುತ ದಾವೆ ಸಲ್ಲಿಸುವ ಸಮಯದಲ್ಲಿ ನಿ.ಪಿ.4 ರ ಬಗ್ಗೆ ನನಗೆ ತಿಳಿದಿರುತ್ತದೆ. ನಿ.ಪಿ.4 ಅನ್ನು ನಾನು ಪ್ರಶ್ನಿಸಿರುವುದಿಲ್ಲ. ಸದರಿ ಶ್ರೀನಿವಾಸ ರವರಿಗೆ ಬಂದ 36 1/2 ಗುಂಟೆಯಲ್ಲಿ 22 ಗುಂಟೆಯನ್ನು 11ನೇ ಪ್ರತಿವಾದಿ ಮುನಿರಾಜುರವರಿಗೆ ಮಾರಾಟ ಮಾಡಿದ ಬಗ್ಗೆ ನನಗೆ ಗೊತ್ತಿಲ್ಲ. ದಾವಾ ಐಟಂ ಸಂಖ್ಯೆ:3 ಅನ್ನು 11ನೇ ಪ್ರತಿವಾದಿ ಖರೀದಿ ಮಾಡಿರುತ್ತಾರೆ ಎಂದರೆ ನನಗೆ ಗೊತ್ತಿಲ್ಲ. ದಾವಾ ಐಟಂ.3 ರ ಸ್ವತ್ತಿಗೆ 11ನೇ ಪ್ರತಿವಾದಿ ಖಾತೆ ಮಾಡಿಸಿಕೊಂಡ ಬಗ್ಗೆ ನನಗೆ ಗೊತ್ತಿಲ್ಲ. ಸದರಿ ಸ್ವತ್ತಿನಲ್ಲಿ 2 ಮತ್ತು 6ನೇ ಪ್ರತಿವಾದಿಗಳು ಸ್ವಾಧೀನದಲ್ಲಿಲ್ಲ ಎಂದರೆ ಸರಿಯಲ್ಲ. 2 ಮತ್ತು 6ನೇ ಪ್ರತಿವಾದಿಗಳು ಸ್ವಾಧೀನದಲ್ಲಿದಿದ್ದರೂ ನಾನು ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. 2 ಮತ್ತು 6ನೇ ಪ್ರತಿವಾದಿಗಳಿಗೆ ಸೇರಿದ ದಾಖಲೆಗಳನ್ನು ನಾನು ಅವರಿಂದ ಪಡೆದು, ನಾನು ದಾವೆ ಸಲ್ಲಿಸಿರುತ್ತೇನೆ ಎಂದರೆ ಸರಿಯಲ್ಲ. 2 ಮತ್ತು 6ನೇ ಪ್ರತಿವಾದಿಗಳು ದಾವೆ ಸಲ್ಲಿಸುವ ಸಮಯದಲ್ಲಿ ನನಗೆ ಸಹಾಯ ಮಾಡಿದ್ದು, ಈಗ ಮಾಡುತ್ತಿಲ್ಲ. 1990 ರಿಂದ ಇಲ್ಲಿಯವರೆಗೂ 2 ಮತ್ತು 6 ನೇ ಪ್ರತಿವಾದಿಗಳು ದಾವಾ ಸ್ವತ್ತುಗಳು ಬಗ್ಗೆ ನನಗೆ ಮಾಹಿತಿ ಕೊಡುತ್ತಿದ್ದರು ಎಂದರೆ ಸರಿಯಲ್ಲ. 11ನೇ ಪ್ರತಿವಾದಿಯ ಖರೀದಿ ಪತ್ರವನ್ನು ನಾನು ಪ್ರಶ್ನಿಸಿರುವುದಿಲ್ಲ.

ಸದರಿ ಮುನಿತಾಯಮ್ಮ ತಮ್ಮ ಪಾಲಿಗೆ ಬಂದಂತಹ ಆಸ್ತಿಯನ್ನು ಅವರ ಮಗಳಿಗೆ ದಾನವಾಗಿ ನೀಡಿರುತ್ತಾರೆ ಎಂದರೆ ನನಗೆ ಗೊತ್ತಿಲ್ಲ. ದಾವಾ ಸ್ವತ್ತುಗಳ ಬಗ್ಗೆ ನನಗೆ ಏನೂ ಗೊತ್ತಿಲ್ಲ, 2 ಮತ್ತು 6ನೇ ಪ್ರತಿವಾದಿಗಳಿಗೆ ಮಾತ್ರ ಎಲ್ಲವೂ ತಿಳಿದಿರುತ್ತದೆ ಎಂದರೆ ಸರಿ. 2 ಮತ್ತು 6ನೇ ಪ್ರತಿವಾದಿಗಳು ತಮ್ಮ ಪಾಲಿಗೆ ಬಂದಂತಹ ಆಸ್ತಿಯನ್ನು ಅವರು ಬೇರೆಯವರಿಗೆ ಮಾರಾಟ ಮಾಡಿರುತ್ತಾರೆ ಎಂದರೆ ನನಗೆ ಗೊತ್ತಿಲ್ಲ. ನನ್ನ ತಂದೆ ಕೆಂಪಣ್ಣ ಹಾಗೂ ಅವರ ಮಕ್ಕಳು ಮತ್ತು ಪತ್ನಿ ಸೇರಿ ಮೊದಲೇ ಭಾಗ ಮಾಡಿಕೊಂಡಿರುತ್ತಾರೆ ಎಂದರೆ ನನಗೆ ಗೊತ್ತಿಲ್ಲ. ನಾನು ದಾವೆಯನ್ನು

ಸಲ್ಲಿಸುವ ಸಮಯಲ್ಲಿ ಸದರಿಯವರು ಭಾಗ ಮಾಡಿಕೊಂಡಿರುವ ಬಗ್ಗೆ ನನಗೆ ಗೊತ್ತಾಗಿರುತ್ತದೆ. 11ನೇ ಪ್ರತಿವಾದಿಗೆ ತೊಂದರೆ ಕೊಡುವ ಉದ್ದೇಶದಿಂದ ದಾವೆ ಸಲ್ಲಿಸಿರುತ್ತೇನೆ ಎಂದರೆ ಸರಿಯಲ್ಲ. 11ನೇ ಪ್ರತಿವಾದಿಗೆ ಸೇರಿದ ಆಸ್ತಿಗೂ ಹಾಗೂ ನನಗೂ ಸಂಬಂಧವಿಲ್ಲ ಎಂದರೆ ಸರಿಯಲ್ಲ.

**ಮರುವಿಚಾರಣೆ ಇಲ್ಲ.**

**(ಮುಕ್ತ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದ ಮೇರೆಗೆ ಗಣಕೀಕರಿಸಲಾಯಿತು)**

**ಓ.ಹೇ.ಕೇ.ಸ.ಇದೆ**

**2ನೇ ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು, ಹೊಸಕೋಟೆ.**